ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

NO. 1, 2nd Floor, DTE Building, Palace Road, Bangalore - 560 001; Phone: 080 2226 3327, Fax: 080 2228 3758, email: bngcce@kar.nic.in

ಸಂಖ್ಯೆ: ಕಾಶಿಇ/05/ಸಾಮಾನ್ಯ/ಮಾತಂವಿ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 5 .05. 2018

## ಸುತ್ತೋಲೆ

**ವಿಷಯ:** ಏಳನೇ ವೇತನ ಆಯೋಗದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮಗ್ರ ಮಾಹಿತಿಯನ್ನು ಒದಗಿಸುವ ಬಗ್ಗೆ

**********

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಏಳನೇ ವೇತನ ಆಯೋಗದ ವರದಿಯನ್ನು ಅನುಷ್ಠಾನಗೊಳಸುವ ಪ್ರಯುಕ್ತ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನವನ್ನು ಪಡೆಯುತ್ತಿರುವ ಎಲ್ಲಾ ಸಹಾಯಕ/ಸಹ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು, ಗ್ರಂಥಪಾಲಕರು ಹಾಗೂ ಪ್ರಾಂಶುಪಾಲರು ಗ್ರೇಡ್-1/2 ಇವರುಗಳ ಮಾಹಿತಿ ಅಗತ್ಯವಿರುತ್ತದೆ.

ಆದುದರಿಂದ ಇಲಾಖೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುವ/ಪ್ರಕಟಿಸಿರುವ ಲಿಂಕ್ ಮೂಲಕ Excel ನಮೂನೆಯನ್ನು ಡೌನ್ ಲೋಡ್ ಮಾಡಿಕೊಂಡು ಅಗತ್ಯ ಮಾಹಿತಿಯನ್ನು ದಿನಾಂಕ:01.01.2016ರಲ್ಲಿದ್ದಂತೆ ತಮ್ಮ ಕಾಲೇಜಿನಲ್ಲಿ ಯು.ಜಿ.ಸಿ ವೇತನ ಪಡೆಯುತ್ತಿದ್ದ ಎಲ್ಲಾ ಬೋಧಕ ಸಿಬ್ಬಂದಿಗಳ ವಿವರಗಳನ್ನು **ಡೌನ್ ಲೋಡ್ ಮಾಡಿಕೊಂಡ** Excel File ನಲ್ಲಿ ನಮೂದಿಸಿ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ **dce.7thpay@gmail.com** ವಿಳಾಸಕ್ಕೆ ಹಾಗೂ ದೃಢೀಕೃತ ಹಾರ್ಡ್ ಕಾಪಿಯನ್ನು ದಿನಾಂಕ:19.5.2018ರೊಳಗೆ ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ದಿನಾಂಕ:01.01.2016ರ ನಂತರ ನಿವೃತ್ತಿ/ನಿಧನ ಹೊಂದಿದ ಬೋಧಕ ಸಿಬ್ಬಂದಿಗಳ ಮಾಹಿತಿಯನ್ನೂ ಸಹ ನಮೂದಿಸುವಂತೆ ಸೂಚಿಸಲಾಗಿದೆ.

ಈ ವಿಷಯವನ್ನು ಅತ್ಯಂತ ಜರೂರು ಎಂದು ಭಾವಿಸಿ ತಪ್ಪುಗಳಿಗೆ ಅವಕಾಶವಿಲ್ಲದೆ **ಡೌನ್ ಲೋಡ್ ಮಾಡಿಕೊಂಡ** **Excel File** ನಮೂನೆಯಲ್ಲಿ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:**

1. ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರದೇಶಿಕ ಜಂಟಿ ನಿರ್ದೇಶಕರುಗಳು – ***ತಮ್ಮ ಕಛೇರಿ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಮಾಹಿತಿಯನ್ನು ಕಾಲೇಜುಗಳಿಂದ ಪಡೆದು ಸಲ್ಲಿಸಲು ತಿಳಿಸಲಾಗಿದೆ.***

**ಪ್ರತಿಯನ್ನು:**

1. ಆಪ್ತ ಶಾಖೆ-ಆಯುಕ್ತರು/ನಿರ್ದೇಶಕರು/ ಮುಖ್ಯ ಆಡಳಿತಾಧಿಕಾರಿಗಳು-ಮಾಹಿತಿಗಾಗಿ
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ-ವೆಬ್ ಸೈಟ್‌ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ